


ರಾಮಮನೋಹರ ಲೋಹಿಯಾ ಜೀವನಯಾನ

■ ನಟರಾಜ್ ಹುಳಿಯಾರ್

ಕಲೆ: ಎಚ್.ಎಸ್. ಮೋನಪ್ಪ

# ಗುರುವಿನ ನಿರ್ಗಮನ; ಗುರಿ, ದಾರಿಗಳ ಹೊಸ ಹುಡುಕಾಟ

ಬ್ರಿಟಿಷ್ ಆಡಳಿತದಲ್ಲಿದ್ದ ಬರ್ಮಾದ ಪ್ರಧಾನಿ ಆಂಗ್ ಸಾನ್ ಹತ್ಯೆಯ ರೀತಿಯಲ್ಲಿ ಭಾರತ ಸರ್ಕಾರದ ಮಂತ್ರಿಗಳನ್ನು ಮುಗಿಸಲು ಲೋಹಿಯಾ ಸಂಚು ರೂಪಿಸಿದ್ದಾರೆಂಬ ಗುಪ್ತಚರ ವರದಿಯ ದೂರನ್ನು ಗಾಂಧೀಜಿಗೆ ಒಪ್ಪಿಸಿದ ಭಾರತದ ಗೃಹಮಂತ್ರಿ ಸರ್ದಾರ್ ವಲ್ಲಭಭಾಯಿ ಪಟೇಲರು ಗಾಂಧೀಜಿಯ ಕೊಠಡಿಯಿಂದ ಹೊರಬಂದರು; ಅದೇ ಆಗ ಲೋಹಿಯಾ ಗಾಂಧೀಜಿಯನ್ನು ಭೇಟಿಯಾಗಲು ಒಳಬರುತ್ತಿದ್ದರು.

ಆ ವಿಚಿತ್ರ ದಿನವನ್ನು ಲೋಹಿಯಾ ನೆನೆಯುತ್ತಾರೆ:

‘ನಾನು ಗಾಂಧೀಜಿಯವರ ಕೊಠಡಿಯನ್ನು ಪ್ರವೇಶಿಸುತ್ತಿರುವಾಗ, ಅಲ್ಲಿಂದ ಹೊರಬರುತ್ತಿದ್ದ ಸರ್ದಾರ್ ಪಟೇಲರು ನನ್ನನ್ನು ಕೇಳಿದರು: ‘ನೀವು ನಮ್ಮನ್ನೆಲ್ಲ ಮುಗಿಸಿಬಿಡುವುದು ಯಾವಾಗ?’

ಗುಪ್ತಚರ ವಿಭಾಗದ ವರದಿಯ ಬಗೆಗೆ ಏನೂ ಗೊತ್ತಿಲ್ಲದೆ, ಹಾಗೂ ಗೃಹಮಂತ್ರಿಗಳು ನನ್ನೊಡನೆ ಮಾತಾಡುತ್ತಿದ್ದಾರೆಂಬುದನ್ನು ಮರೆತು, ನಾನು ಚೇಷ್ಟೆಯ ದನಿಯಲ್ಲಿ ಹೇಳಿದೆ:

‘ನಮಗಿನ್ನೂ ಅಷ್ಟು ಶಕ್ತಿ ಕೂಡಿ ಬಂದಿಲ್ಲ; ಆದರೆ, ನಿಮ್ಮನ್ನು ಪಕ್ಕಕ್ಕೆ ತಳ್ಳಿ ನಿಮಗಿಂತ ಅಯೋಗ್ಯರು ನಿಮ್ಮ ಸ್ಥಾನಗಳಿಗೆ ಬರದಂತೆ ನೋಡಿಕೊಳ್ಳಲು ನನ್ನ ಸರ್ವಶಕ್ತಿಯನ್ನೂ ಬಳಸುತ್ತಿದ್ದೇನೆ.’

ಪಟೇಲರ ‘ಪೊಲೀಸ್ ಕತೆ’ ಲೋಹಿಯಾಗೆ ಆಮೇಲೆ ತಿಳಿಯಿತು:

‘ಬರ್ಮಾದ ಆಂಗ್ ಸಾನ್ ಹಾಗೂ ಅವರ ಕೆಲವು ಮಂತ್ರಿಗಳ ಹತ್ಯೆ ಆಗ ನಡೆದಿತ್ತು. ಆಂಗ್ ಸಾನ್ ಮಾದರಿಯಲ್ಲಿ ಭಾರತ ಸರಕಾರವನ್ನು ಉರುಳಿಸುವ ಸನ್ನಾಹದಲ್ಲಿ ನಾನಿದ್ದೇನೆ, ಹಾಗೂ ಭೂಗತ ಚಳುವಳಿಯ ಮೂಲಕ ಭಾರತ ಸರಕಾರದ ಮಂತ್ರಿಗಳ ಹತ್ಯೆ ನಡೆಸುವ ವಿಚಾರದಲ್ಲಿದ್ದೇನೆ ಎಂದು ನಾಗಪುರದ ಗುಪ್ತಚರ ಪೊಲೀಸರು ವರದಿ ಮಾಡಿದ್ದರು.

ಒಂದೆರಡು ದಿನಗಳಲ್ಲೇ ಈ ಎಲ್ಲ ಮಾತುಗಳು ಇನ್ನಷ್ಟು ಗಟ್ಟಿಯಾಗಿ ಕೇಳಿ ಬಂದು, ಗುಪ್ತಚರ ವಿಭಾಗದ ವರದಿಯ ವಿಷಯವನ್ನು ಗಾಂಧೀಜಿ ನನಗೆ ತಿಳಿಸಿದರು.

‘ಇವು ನಿಮ್ಮ ಆಲೋಚನೆಗಳೇ?’ ಎಂದರು ಗಾಂಧೀಜಿ.

‘ಇದು ಅತ್ಯಂತ ಮೂರ್ಖ ವರದಿ’ ಅಂದೆ.

ಬ್ರಿಟಿಷ್ ಆಡಳಿತದ ಕಾಲದಲ್ಲೂ ಸಾರಿಗೆ, ಸಾಗಾಣಿಕೆ ನಿಲ್ಲಿಸುವ ಹಾಗೂ ವಸ್ತುಗಳನ್ನು ನಾಶಗೊಳಿಸುವ ಕೆಲಸಕ್ಕೂ, ಸರ್ಕಾರಿ ಸಿಬ್ಬಂದಿಯ ನಾಶಕ್ಕೂ ನಡುವೆ ನಿಖರವಾದ ವ್ಯತ್ಯಾಸವನ್ನು ನಾನು ಗುರುತಿಸಿದ್ದೆ. 1942–43ರ ಅವಧಿಯಲ್ಲಿ ಬ್ರಿಟಿಷರ ವಿರುದ್ಧ ತೀವ್ರ ಸಂಘರ್ಷಕ್ಕೆ ಇಳಿದಾಗಲೂ ಕೂಡ ನಾವು ಈ ಪ್ರಶ್ನೆಗಳನ್ನು ಸದಾ ಚರ್ಚಿಸುತ್ತಿದ್ದೆವು: ‘ನಾವು ಗೂಡ್ಸ್

